# ಕವಡೆಗೆ ಬಂತು ಫ್ಯಾಷನ್ ಕಿಮ್ಮತ್ತು



**ಬುಡಕಟ್ಟು ಜನರ ಮೈಮೇಲೆ ಕಾಣಿಸಿಕೊಳ್ಳುತ್ತಿದ್ದ ಕವಡೆ ಆಭರಣಗಳು ಈಗ ಆಧುನಿಕ ಯುವತಿಯರ ಫ್ಯಾಷನ್ ಸ್ಟೇಟ್‌ಮೆಂಟ್ ಆಗಿವೆ. ಬೋಲ್ಡ್ ಲುಕ್, ಭಿನ್ನತೆ– ಅನನ್ಯತೆ ಬಯಸುವ ಜೊತೆಗೆ ಕಲಾಪ್ರಿಯ ಮಹಿಳೆಯರಿಗೆ ಕವಡೆ ಒಡವೆಗಳ 'ಬೋಹೊ ಲುಕ್' ಆಕರ್ಷಕವೆನಿಸಿದೆ.**

■ ಎಸ್ಸೆನ್

ಬೇರೆ ಬೇರೆ ಬಟ್ಟೆಯ ತುಂಡುಗಳನ್ನು ಸೇರಿಸಿದಂತೆ ಹೊಲಿದ ಉದ್ದದ ಲಂಗ. ಸಡಿಲ ಮೇಲುಡುಗೆ ತೊಟ್ಟಿದ್ದ ಆಕೆಯ ಕುತ್ತಿಗೆಯಲ್ಲಿ ಕವಡೆ ಸರ ನೇತಾಡುತ್ತಿತ್ತು. ಭುಜದ ಮೇಲೆ ಹರಡಿಕೊಂಡಿದ್ದ ಗುಂಗುರು ಕೂದಲನ್ನು ಕಪ್ಪೆ ಚಿಪ್ಪಿನ ಬ್ಯಾಂಡ್ ನಾಜೂಕಾಗಿ ಕಟ್ಟಿಹಿಡಿದಿತ್ತು. ಬೆರಳಿನಲ್ಲೂ ಕವಡೆ ಉಂಗುರ. ಬಗಲಲ್ಲಿ ಬಟ್ಟೆಯ ಬ್ಯಾಗ್. ಒಟ್ಟಾರೆ ಭಿನ್ನವಾಗಿ ಕಾಣುಸುವಂಥ, ಅನೌಪಚಾರಿಕವಾದ 'ಬೋಹೊ' ಫ್ಯಾಷನ್ ಶೈಲಿ, ಆಕೆಯನ್ನು ಗುಂಪಿನಲ್ಲಿ ಎದ್ದುಕಾಣುವಂತೆ ಮಾಡಿತ್ತು.

ಈ ರೀತಿ ಕ್ರಮಬದ್ಧವಲ್ಲದ, ಯಾವುದೇ ರೀತಿ ರಿವಾಜು ಇಲ್ಲದ ಉಡುಗೆ ತೊಡುಗೆಯ 'ಬೋಹೊ' ಫ್ಯಾಷನ್ ಶೈಲಿ ಮೆಚ್ಚುವ ಯುವತಿಯರಿಗೆ ಈಗ ಸುಲಭ ಆಯ್ಕೆ ಎನಿಸಿರುವುದು ಬ್ಲಾಕ್ ಮೆಟಲ್ ಇಲ್ಲವೇ ಈ ಕವಡೆ ಒಡವೆಗಳು. 'ಮೇಕಪ್'ರಹಿತ ಫ್ಯಾಷನ್' ಬಯಸುವ ಹುಡುಗಿಯರಿಗೆ ಈ ಕವಡೆ ಆಭರಣಗಳು ಆಕರ್ಷಣೆಯ ಕೇಂದ್ರಬಿಂದುವಾಗಿಸಬಲ್ಲ ಸಾಧನಗಳು.

ಕಡಲ ತಡಿಗಳಲ್ಲಿ ವಾಸ ಮಾಡುತ್ತಿದ್ದ, ಇಲ್ಲವೇ ಕೆಲ ಬುಡಕಟ್ಟು ಜನಾಂಗಗಳ ಆಭರಣಗಳಲ್ಲಿ ಬಳಕೆಯಾಗುತ್ತಿದ್ದ ಈ ಕವಡೆಗಳೀಗ ಆಧುನಿಕ ಯುವತಿಯರ ಆಕರ್ಷಕ ಆಭರಣಗಳ ಪಟ್ಟ ಗಿಟ್ಟಿಸಿಕೊಂಡಿವೆ. ನವನವೀನ ವಸ್ತ್ರಗಳಿಗೆ ತಕ್ಕಂತೆ ಕವಡೆಗಳಲ್ಲಿಯೇ ವಿಧವಿಧದ ಫ್ಯಾಷನ್ ಆಭರಣಗಳನ್ನು ವಿನ್ಯಾಸಗೊಳಿಸಿದ್ದು, ಕವಡೆ ಒಡವೆಗಳು ಯುವತಿಯರ ಫ್ಯಾಷನ್ ಸ್ಟೇಟ್‌ಮೆಂಟ್ ಆಗುತ್ತಿವೆ.

ಜಾಗತಿಕ ಫ್ಯಾಷನ್ ವೇದಿಕೆಯಲ್ಲೂ ಕವಡೆ ವಿನ್ಯಾಸಕ್ಕೆ ಗತ್ತು ದಕ್ಕಿದೆ. ಅಂತರರಾಷ್ಟ್ರೀಯ ಫ್ಯಾಷನ್ ಶೋಗಳಲ್ಲಿ ಕವಡೆಗಳು ಸದ್ದು ಮಾಡುತ್ತಿವೆ. ಕವಡೆಗಳಿಂದ ವಿನ್ಯಾಸಗೊಳಿಸಿದ ವಸ್ತ್ರಗಳನ್ನು, ಶಿರಾಭರಣ (head dress), ಕವಡೆಯಿಟ್ಟು ಪೋಣಿಸಿದ ಕೇಶಾಲಂಕಾರ, ಕವಡೆಯ ಬಗೆ ಬಗೆ ಆಭರಣಗಳೊಂದಿಗೆ ಮಿಂಚುವ ರೂಪದರ್ಶಿಗಳನ್ನು ನೋಡಬಹುದು. ಸಂಗೀತ ಸಾಧನಗಳಲ್ಲಿ, ವಸ್ತ್ರಗಳಲ್ಲಿ, ಕೇಶ ವಿನ್ಯಾಸದಲ್ಲಿ ಕವಡೆಗಳನ್ನು ಹೆಚ್ಚಾಗಿ ಬಳಸುವ ಪರಿ ಕೆಲ ವರ್ಷಗಳಿಂದೀಚೆ ವಿದೇಶಗಳಲ್ಲಿ ಹೆಚ್ಚಾಗಿದೆ.

'ಬೋಹೊ ಲುಕ್' ಮೂಲತಃ ಅಲೆಮಾರಿ ಜೀವನಶೈಲಿ ಪ್ರತಿನಿಧಿಸುವ ಫ್ಯಾಷನ್. ಇದ್ದುದರಲ್ಲೇ ಕಲಾತ್ಮಕತೆ ಕಂಡುಕೊಳ್ಳುವ, ನೈಸರ್ಗಿಕವಾಗಿ ಸಿಕ್ಕಿದುದರಲ್ಲೇ ಹೊಸತನ್ನು ರೂಪಿಸುವ, ಅದರಲ್ಲೇ ಭಿನ್ನತೆ ಪ್ರದರ್ಶಿಸುವ ಈ ಪರಿ ಕವಡೆಯನ್ನೂ ಒಳಗೊಂಡಿದೆ. ಈ ಫ್ಯಾಷನ್ ರೀತಿಯನ್ನು ಮೆಚ್ಚುವ ಯುವತಿಯರ ಕಣ್ಣುಗಳು ಮೊದಲು ಹೊರಳುವುದು ಕವಡೆಗಳತ್ತಲೇ. ಕಲಾಪ್ರಿಯರಿಗೆ ಕವಡೆ ಕಲಾತ್ಮಕ ವಸ್ತು. ನೈಸರ್ಗಿಕ ಕಲೆಯಂತಿರುವ ಕವಡೆಗಳನ್ನು ತೊಡುವುದು ಕಲಾತ್ಮಕ ಅಭಿವ್ಯಕ್ತಿ ಎಂದು ಭಾವಿಸುವ ಮಹಿಳೆಯರು ಈ ಕವಡೆ ಒಡವೆಗಳ ನಿಸರ್ಗಸಹಜ ಅಂದ ಚೆಂದಕ್ಕೆ ಮಾರುಹೋಗಿದ್ದಾರೆ.

ಕವಡೆಗೂ ಫ್ಯಾಷನ್‌ಗೂ ಏನೀ ಸಂಬಂಧ? ನಾಗರೀಕತೆಯ ಹಾದಿಯನ್ನೊಮ್ಮೆ ತಿರುಗಿ ನೋಡಿದರೆ ಇದರ ಮೂಲ ಕಾಣಬಹುದು. ಆದಿಮಾನವ ಆರಂಭದಲ್ಲಿ, ತನ್ನ ಗುರುತಿಗೆಂಬಂತೆ

